# ಅಕ್ಕಮಹಾದೇವಿಯ ವಚನಗಳಲ್ಲಿ ಅನುಭಾವ

ಟಿ.ಸಿ. ಪೂರ್ಣಿಮಾ

ಬೆಂಗಳೂರಿನಲ್ಲಿ ಕದಳಿ ಮಹಿಳಾ ವೇದಿಕೆ ೧೦.೩.೨೦೦೧ ರಂದು ಏರ್ಪಡಿಸಿದ ಶರಣಚಿಂತನ ಧಾರೆ ಕಾರ್ಯಕ್ರಮದಲ್ಲಿ ಮಂಡಿಸಿದ ವಿಶೇಷ ಉಪನ್ಯಾಸದ ಲೇಖನರೂಪ. ಅಕ್ಕಮಹಾದೇವಿಯ ಆಧ್ಯಾತ್ಮಿಕ ಅನುಭವದ ಗಭೀರತೆಯನ್ನೂ ಸರ್ವಗ್ರಾಹಿತ್ವವನ್ನೂ ಈ ಲೇಖನವು ಪ್ರತಿಬಿಂಬಿಸುತ್ತದೆ. ಶ್ರೀಮತಿ ಪೂರ್ಣಿಮಾ ಅವರು ಕರ್ನಾಟಕದ ಮುಖ್ಯಮಂತ್ರಿಯವರ ಕಛೇರಿಯಲ್ಲಿ ವಿಶೇಷಾಧಿಕಾರಿಗಳಾಗಿರುವರು.

**ಕ**ನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನ ಒಂದು ವಿಶಿಷ್ಟ ಸಂದರ್ಭ. ಸಾಮಾಜಿಕವಾಗಿಯೂ, ಧಾರ್ಮಿಕವಾಗಿಯೂ ವಿಶೇಷ ಬದಲಾವಣೆಗೆ ಒಳಪಟ್ಟ ಸಮಯ. ನಾಡಿನ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯ ಮೇಲೆ ಸಾಹಿತ್ಯದ ಮೂಲಕ ಅದ್ಭುತ ಪರಿಣಾಮ ಉಂಟಾದ ಸಂಧಿಕಾಲ. ಬಸವಯುಗದ ಸಾಹಿತ್ಯ, ವೈದಿಕ ಸಂಪ್ರದಾಯದ ಕಟ್ಟುಕಟ್ಟಲೆಗಳ ವಿರುದ್ಧ ಸಿಡಿದೆದ್ದ ಒಂದು ಪಂಗಡದವರ ಕೂಗೂ ಆಗಿದ್ದುದರಿಂದ ಪರಂಪರಾನುಗತವಾಗಿ ಬಂದಿದ್ದ ಸಮಾಜದ ರೀತಿ ರಿವಾಜುಗಳಿಗೆ ತೀವ್ರ ಸವಾಲು ಒಡ್ಡಿದ್ದು ಗಮನಾರ್ಹ. ಹಾಗೆಯೇ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಹಾಗೆ ಧ್ವನಿ ಎತ್ತಿದವರು ಶೈವ ಸಂಪ್ರದಾಯವಾದಿಗಳಾಗಿದ್ದುದರಿಂದ ಸಹಜವಾಗಿಯೇ ಅವರು ಶಿವತತ್ತ್ವ ಚಿಂತನೆಗೂ ತಮ್ಮ ವಚನಗಳಲ್ಲಿ ಸಾಕಷ್ಟು ಪ್ರಾಮುಖ್ಯ ನೀಡಿದ್ದರು ಮತ್ತು ಒಂದು ಹೊಸ ಧಾರ್ಮಿಕ ಪರಂಪರೆ ಅಂಕುರಿಸುತ್ತಿದ್ದ ಕಾಲಕ್ಕೆ ಅಂತಹ ಪ್ರಾಮುಖ್ಯತೆ ಅವಶ್ಯಕವಾಗಿತ್ತು ಎನ್ನುವುದು. ಹಾಗಾಗಿ ಅಂದಿನ ಸಾಮಾಜಿಕ, ಧಾರ್ಮಿಕ ಜೀವನದಲ್ಲಿ ಕಂಡು ಬರುತ್ತಿದ್ದ ಮೂಲಭೂತ ವ್ಯತ್ಯಾಸಗಳೂ, ಅದಕ್ಕೆ ಮೂಡಿಬರುತ್ತಿದ್ದ ನಕಾರಾತ್ಮಕ ಪ್ರತಿಕ್ರಿಯೆಗಳೂ ಆ ನುಡಿ, ವಚನಗಳ ಮೂಲಕ ಹೊರಹೊಮ್ಮಿ ನಾಡಿನ ಜನಜೀವನದ ಮೇಲೆ ಆಳವಾದ ಪರಿಣಾಮ ಬೀರಿ ಹೊಸ ಚಿಂತನೆಯ ಮಾರ್ಗಗಳನ್ನು ತೆರೆದವು. ಸಮಾಜ ಸುಧಾರಕ ಕ್ರಿಯೆಗಳು ನಡೆದದ್ದು ಒಂದು ಕಡೆಗಾದರೆ, ಧಾರ್ಮಿಕ ಚಿಂತನ ಮಂಥನಗಳು ಪರಾಕಾಷ್ಠೆ ತಲುಪಿದ್ದು ಮತ್ತೊಂದು ಘಟ್ಟ. ಲೌಕಿಕ ಬದುಕಿನ ಎಲ್ಲೆ ದಾಟಿ ಅಲೌಕಿಕ ಸಾಧನೆಯ ಪ್ರಭಾವಲಯದ ಕಡೆಗೆ ಜನಮನ ಹರಿಯತೊಡಗಿತು. ಸಮಾಜದ ಆಂತರ್ಯದಲ್ಲಿ ಶೈವಧರ್ಮ ಸಾಧನೆಯ ಬೆಳಕು ಮೂಡಿ ಹೊಸತನಕ್ಕೆ ಹೊಸ ಪರಿವರ್ತನೆಗೆ ಅವಕಾಶವನ್ನು ಕಲ್ಪಿಸಿದ "ಕ್ರಾಂತಿ ಸಾಹಿತ್ಯ" ಅರ್ಥಾತ್ ವಚನ ಸಾಹಿತ್ಯದ ಸೃಷ್ಟಿಕರ್ತರು ಶಿವಶರಣರು. ಭಕ್ತಿಭಂಡಾರಿ ಬಸವಣ್ಣನವರ ಮುಂದಾಳತ್ವದಲ್ಲಿ ಆಧ್ಯಾತ್ಮಿಕ ಪ್ರಭೆ ಎಲ್ಲೆಡೆ ಪಸರಿಸತೊಡಗಿತು.



ಹನ್ನೆರಡನೇ ಶತಮಾನದ ಪೂರ್ವಾರ್ಧದಲ್ಲಿ ಬಸವಣ್ಣನವರ ಮತ್ತು ಪ್ರಭುದೇವರ ತತ್ವಾದರ್ಶಗಳಿಗೆ ಸ್ಪಂದಿಸುತ್ತಾ ವೀರಶೈವ ಪರಂಪರೆಯ ಮಹಾನ್ ಶಕ್ತಿಯಾಗಿ ಕಾಣಬರುವವಳು ಮಹಾದೇವಿಯಕ್ಕ. ಕನ್ನಡದ ಆದ್ಯ ಕವಯಿತ್ರಿಯಾಗಿರುವ ಅಕ್ಕನ ವ್ಯಕ್ತಿತ್ವ ಲೋಕೋತ್ತರವೂ ನಿಗೂಢವೂ ಧರ್ಮ ಸಾಪೇಕ್ಷವೂ ಆಗಿತ್ತೆಂದು ಆಕೆಯ ಸಮಕಾಲೀನ ಪುರುಷ ಸಾಧಕರೂ ಒಪ್ಪಿದ್ದಾರೆ. ಆಕೆಯ ಮನೋಮಿಡಿತ ಅಲೌಕಿಕವೂ ಲೋಕೋತ್ತರವೂ ಆಗಿದ್ದುದರಿಂದ ಆಕೆಯ ವಚನಗಳೂ ತ್ರಿಪದಿಗಳೂ ಪಾರಮಾರ್ಥಿಕತೆಯ ಪರಿಭಾಷೆಯನ್ನು ಹೊಂದಿದ್ದರೆ ಅಚ್ಚರಿಪಡಬೇಕಾದ್ದಿಲ್ಲ. ಅಕ್ಕಮಹಾದೇವಿ ಬೋಧಕಿಯಲ್ಲ, ಮಹಾನ್ ಸಾಧಕಿ ಎನ್ನುವುದಕ್ಕೆ ಆಕೆಯ ವಚನಗಳು ಉಪದೇಶ ನೀಡುವ ಬದಲಿಗೆ ಧರ್ಮಾದರ್ಶಗಳ ಕಡೆಗೆ ಮುಖ ಮಾಡಿ ನಿಂತಿರುವುದೇ ಸ್ಪಷ್ಟ ಉತ್ತರ. ಈ ವಿರಾಗಿಣಿಯ ಮನದಲ್ಲಿ ವೈರಾಗ್ಯವೆನ್ನುವುದಕ್ಕೂ ಅಸಾಮಾನ್ಯವಾದ ಅರ್ಥವಿದೆ. ಲೌಕಿಕ ಬದುಕಿನ ಬಾಹ್ಯ ಆಕರ್ಷಣೆಗಳ ಪರಿತ್ಯಾಗವೇ ವೈರಾಗ್ಯವಲ್ಲ, ಶಿವಾಕರ್ಷಣೆಯೇ ವಿರಕ್ತಿ ಎನ್ನುತ್ತಾಳೆ ಅಕ್ಕ.

**ಹುಟ್ಟು ಕೆತ್ತುವ ದೊಂಬನಂತೆ**
**ಬಿಟ್ಟ ಮಂಡೆಯ ಕೇಶವ ನುಣ್ಣಿಸಿ, ಬಣ್ಣಿಸಿ**
**ಎಣ್ಣೆಯ ಗಂಟ ಹಾಕಿದಡೆ ವಿರಕ್ತನೆ?**
**.....**

ಹೊನ್ನು ಹೆಣ್ಣು ಮಣ್ಣು ಬಿಟ್ಟು
ಅಡವಿಯಾರಣ್ಯದಲ್ಲಿ ದರಡೆ ವಿರಕ್ತನೆ? ಅಲ್ಲ.
ವಿರಕ್ತನ ಪರಿಯಂತೆಂದೊಡೆ
ಒಡಲ ಹುಡಿಗಟ್ಟಿ, ಮೃಡನೊಳೆಡದೆರಹಿಲ್ಲದಿರ
ಬಲ್ಲಡೆ ವಿರಕ್ತನಪ್ಪನು.

ಹೀಗೆ ವಿರಕ್ತೆಯಾದವಳು ಅಕ್ಕಮಹಾದೇವಿ, ಇಹದ ಸಕಲ ಸಂಪದವನ್ನೂ ಧಿಕ್ಕರಿಸಿ ಅನುಭಾವಿಯಾದವಳು. ಇಂದ್ರಿಯಾತೀತ ಅನುಭವದ ಮೂಸೆಯಲ್ಲಿ ಬಾಳ್ವೆಯನ್ನು ದ್ರವೀಕರಿಸಿ ಅದಕ್ಕೊಂದು ದೃಢ ಸ್ವರೂಪವನ್ನು ಕೊಟ್ಟುಕೊಂಡವಳು. ಹಾಗಾಗಿ ಅಕ್ಕನ ವಚನಗಳಲ್ಲಿ ವೈರಾಗ್ಯದೀಪ್ತಿಯಿದೆ, ಪಾರಮಾರ್ಥಿಕ ವೈಭವವಿದೆ. ಅನುಭಾವದ ಸೂಕ್ಷ್ಮಾತಿಸೂಕ್ಷ್ಮ ರೇಣುಗಳಿವೆ.

ಅಕ್ಕನ ಶಿವಾಕರ್ಷಣೆ ಆಕೆಯ ಜೀವನದ ಯಾವುದೋ ಒಂದು ಕಾಲಘಟ್ಟದಲ್ಲಿ ಬಂತೆಂದು ಹೇಳಲಾಗುವುದಿಲ್ಲ. ಚೆನ್ನಮಲ್ಲಿಕಾರ್ಜುನನೆಡೆಗೆ ಆಯಸ್ಕಾಂತದಂತೆ ಆಕರ್ಷಿತಳಾದ ಅಕ್ಕ ಜೀವನ ಪರ್ಯಂತ ಅದೇ ಗುರಿಯೆಡೆಗೆ ಅಭಿಮುಖತೆಯನ್ನು ಹೊಂದುವುದು ಅವಳ ವಚನಗಳಿಂದ ಸ್ಪಷ್ಟ. ಕಣ್ಣಿಗೆ ಕಾಣದ, ಸ್ಪರ್ಶಕ್ಕೆ ಸಿಕ್ಕದ ಯಾವುದೇ ಇಂದ್ರಿಯಕ್ಕೂ ನಿಲುಕದ ಒಂದು ನಾಮಾಂಕಿತವೇ ಅವಳ ಸಮಸ್ತ ಶಕ್ತಿ. ಚೆನ್ನಮಲ್ಲಿಕಾರ್ಜನನೇ ಅವಳ ಸರ್ವಸ್ವ. ಈ ಜಗತ್ತಿನಲ್ಲಿರದ ಯಾವುದೋ ಒಂದು ಕೇಂದ್ರ ಬಿಂದುವಿನ ಕಡೆಗೆ ಅವಳ ಮನ ನಿರಂತರ ತುಡಿಯುತ್ತದೆ. ಅಕ್ಕನೇ ಹೇಳಿಕೊಳ್ಳುವ ಹಾಗೆ :

ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ...
ಚೆಲುವಂಗಾನೊಲಿದೆನವ್ವ
ಎಡೆ ಇಲ್ಲದ ಕಡೆ ಇಲ್ಲದ ತೆರಹಿಲ್ಲದ
ಕುರುಹಿಲ್ಲದ ಚೆಲುವಂಗಾನೊಲಿದೆ ಎಲೆ ಅವ್ವ,
ನೀನು ಕೇಳಾ ತಾಯೆ,
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು
ಕುಲಸೀಮೆ ಇಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ
ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.

ಹೀಗೆ ಆಕಾರ, ಆಕೃತಿ ಇಲ್ಲದೆ ಅಮೂರ್ತಸ್ವರೂಪಕ್ಕೆ ಮಾರು ಹೋಗುವ ಅಕ್ಕ ಇಹದ, ಇಂದ್ರಿಯ ಗ್ರಾಹ್ಯ ಅನುಭವಗಳನ್ನು ಮೀರಿ ನಿಲ್ಲುತ್ತಾಳೆ. ಈ ಇಂದ್ರಿಯಾತೀತ ಅನುಭವ "ಅನುಭಾವ"ದ ಸಲ್ಲಕ್ಷಣವಾಗುವುದರಿಂದ ಅಕ್ಕಮಹಾದೇವಿ "ಮಹಾನ್ ಅನುಭಾವಿ ಶರಣೆ" ಎನಿಸುತ್ತಾಳೆ. ಕಾಮಿಯಾಗಿ ನಿಷ್ಕಾಮಿಯಾಗುತ್ತಾಳೆ; ಸೀಮೆಯಲ್ಲಿರ್ದು ನಿಸ್ಸೀಮೆಯಾಗುತ್ತಾಳೆ.

ಆಕೆಯನ್ನು ಈ ಜಗದ ಯಾವ ವಸ್ತುವೂ ತನ್ನೆಡೆಗೆ ಸೆಳೆದುಕೊಳ್ಳುವುದು ಸಾಧ್ಯವಾಗುವುದಿಲ್ಲ; ಅವಳೂ ಮಾರುಹೋಗುವುದಿಲ್ಲ. ಅವಳನ್ನು ಸೂರೆಗೊಂಡದ್ದು ಒಂದೇ ಒಂದು.

ಎನ್ನ ಮನವ ಸೂರೆಗೊಂಡನವ್ವಾ
ಎನ್ನ ತನುವ ಸೂರೆಗೊಂಡನವ್ವಾ
ಎನ್ನ ಸುಖವನ್ನೊಪ್ಪುಗೊಂಡನವ್ವಾ
ಎನ್ನಿರವನ್ನಿಂಬುಗೊಂಡನವ್ವಾ
ಚೆನ್ನಮಲ್ಲಿಕಾರ್ಜುನನ ಒಲುಮೆಯವಳಾನು.

ಚೆನ್ನಮಲ್ಲಿಕಾರ್ಜುನನ ಹುಡುಕಾಟವೇ ಅಕ್ಕನ ವೈಯಕ್ತಿಕ ಅಗತ್ಯ. ಅದನ್ನು ಮೀರಿ ಅವಳಿಗೆ ಬೇರೇನೂ ಇಲ್ಲ, ಬೇರಾರೂ ಇಲ್ಲ. ಬಾಲ್ಯದಿಂದಲೂ ತಾನು ಶಿವನ ಸತಿ ಎಂಬ ನಂಬಿಕೆಯೊಂದಿಗೇ ಬೆಳೆದು, ಲೌಕಿಕ ಮತ್ತು ಅಲೌಕಿಕ ಸಂಸಾರದ ವಿಚಾರದಲ್ಲಿ ಆಂತರಿಕ ತಳಮಳಕ್ಕೊಳಗಾಗಿ ಒಂದು ಪರಾಕಾಷ್ಠೆಯ ಹಂತದಲ್ಲಿ ಲೌಕಿಕ ಸಂಸಾರವನ್ನು ಪರಿತ್ಯಜಿಸುತ್ತಾಳೆ. ಇಂತಹ ಚೆನ್ನಮಲ್ಲಿಕಾರ್ಜುನನಲ್ಲಿ ತನಗಿದ್ದ ಮೋಹ ಅದಕ್ಕೆ ತಕ್ಕ ಕಾತರ ಕನವರಿಕೆಗಳು ಹೇಗಿದ್ದವೆಂದು ಅಕ್ಕ ಈ ವಚನದಲ್ಲಿ ವರ್ಣಿಸಿದ್ದಾಳೆ :

ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ
ಏರಿಲ್ಲದ ಗಾಯದಲಿ ನೊಂದೆನವ್ವಾ
ಸುಖವಿಲ್ಲದ ಧಾವತಿಗೊಂಡೆನವ್ವಾ
ಚೆನ್ನ ಮಲ್ಲಿಕಾರ್ಜುನ ದೇವರಿಗೊಲಿದು
ಬಾರದ ಭವಗಳಲ್ಲಿ ಬಂದೆನವ್ವ.

ತಾನು ಶರಣ ಸತಿ—ತನ್ನ ಚೆನ್ನಮಲ್ಲಿಕಾರ್ಜುನನೇ ಲಿಂಗಪತಿ ಎನ್ನುವ ವೈಯಕ್ತಿಕ ಭಾವನೆಯನ್ನು "ಶರಣಸತಿ-ಲಿಂಗಪತಿ" ಸಿದ್ಧಾಂತದ ಮೂಲಕ ಬೇರೆಯೆ ರೀತಿಯಲ್ಲಿ ಸಮಷ್ಟೀಕರಿಸುತ್ತಾಳೆ. ಗಂಡುಹೆಣ್ಣಿನ ಬೇಧವಿಲ್ಲದ ಜಗತ್ತಿನ ಸಕಲ ಜೀವಾತ್ಮವೂ ಶರಣ ಸತಿಯರು, ಆನಂದ ಸಾಂದ್ರತೆಯನ್ನೊಳಗೊಂಡ ಲಿಂಗವೇ ಪತಿ ಎಂದು ವ್ಯಾಖ್ಯಾನಿಸುತ್ತಾಳೆ. ಆ ಭಾವವೆ ಸತ್-ಚಿತ್-ಆನಂದಕ್ಕೆ ಸುಗಮ ದಾರಿ ಎನ್ನುತ್ತಾಳೆ. ಇದು ಸುಖದ ಪಾರಮ್ಯವೂ ಅಲ್ಲ ನೋವಿನ ವಿಮುಕ್ತಿಯೂ ಅಲ್ಲ; ಆದರೆ ಇದೊಂದು ಅನಂತ ಆತ್ಮಾನಂದ ಎನ್ನುವ ಹಾಗೆ ಪಾರಮಾರ್ಥಿಕ ಆನಂದದ ಸ್ವರೂಪವನ್ನು ಅಕ್ಕ ಅನುಭವಿಸುತ್ತಾಳೆ; ಇತರರೂ ಅನುಭವಿಸುವಂತೆ ಸಾರುತ್ತಾಳೆ :

ಒಳಗಣ ಗಂಡನವ್ವಾ, ಹೊರಗಿನ ಮಿಂಡನವ್ವಾ
ಎರಡನು ನಡಿಸಲು ಬಾರದವ್ವಾ
ಲೌಕಿಕ ಪಾರಮಾರ್ಥಿಕವೆಂಬೆರಡನು ನಡೆಸಲು ಬಾರದವ್ವಾ
ಚೆನ್ನಮಲ್ಲಿಕಾರ್ಜುನಯ್ಯನಲ್ಲಿ ಬಿಲ್ಲು ಬೆಳವಲಕಾಯಿ
ಒಂದಾಗಿ ಹಿಡಿಯಲು ಬಾರದವ್ವಾ!

ಎಂದು ಹೇಳುವ ಹಾಗೆಯೇ ಇನ್ನೊಂದು ವಚನದಲ್ಲಿ ನಾಕ-ನರಕ, ಸುಖ-ದುಃಖಗಳ ನೆಲೆಯನ್ನು ಗುರುತಿಸುತ್ತಾಳೆ :

ನಿನ್ನರಿಕೆಯ ನರಕವೆ ಮೋಕ್ಷ ನೋಡಯ್ಯ
ನಿನ್ನರಿಯದ ಮುಕ್ತಿಯೇ ನರಕ ಕಂಡಯ್ಯ
ನೀನೊಲ್ಲದ ಸುಖವೆ ದುಃಖ ಕಂಡಯ್ಯ

ನೀನೊಲಿದ ದುಃಖವೇ ಪರಮ ಸುಖ ಕಂಡಯ್ಯ
ಚೆನ್ನಮಲ್ಲಿಕಾರ್ಜುನಯ್ಯ ನೀ
ಕಟ್ಟಿ ಕೆಡಪಿದ ಬಂಧನವೇ ನಿರ್ಬಂಧನವೆಂದಿಪ್ಪೆನು.

ತನ್ನ ನೋವು-ನಲಿವು ಮುಕ್ತಿಬಂಧನಗಳೆಲ್ಲಕ್ಕೂ ತಾನು ಮೆಚ್ಚಿದ ದೇವನನ್ನೇ ಗುರಿ ಮಾಡುತ್ತಾಳೆ ಅಕ್ಕ.

ಚೆನ್ನಮಲ್ಲಿಕಾರ್ಜುನನ ಯಾವ ಯಾವ ಸ್ವರೂಪಕ್ಕೆ ಹೇಗೆ ಹೇಗೆ ಆಕರ್ಷಿತಳಾಗಬಹುದೋ ಹಾಗೆಲ್ಲ ಅಕ್ಕಮಹಾದೇವಿ ಅವನತ್ತ ಆಕರ್ಷಿತಳಾಗಿದ್ದಾಳೆ. ಕುರುಹೇ ಇಲ್ಲದ ಗಂಡನಿಗೆ ತನ್ನ ಅಂತಃಶ್ಚಕ್ಷುಗಳ ದರ್ಶನದಿಂದ ಹೊಸ ಕುರುಹು ನೀಡುತ್ತಾಳೆ.

ಹೊಳೆವ ಜಡೆಯ ಮೇಲೆ ಎಳೆವೆಳುದಿಂಗಳು
ಫಣಿ ಮಣಿ ಕರ್ಣಕುಂಡಲವ ನೋಡವ್ವಾ
ರುಂಡ ಮಾಲೆಯ ಕೊರಳವನ ಕಂಡರೆ ಒಮ್ಮೆ ಬರಹೇಳವ್ವಾ
ಗೋವಿಂದನ ನಯನ ಉಂಗುಟದ ಮೇಲಿಪ್ಪುದು
ಚೆನ್ನಮಲ್ಲಿಕಾರ್ಜುನ ದೇವನ ಕುರುಹವ್ವಾ

ಹೆಣ್ಣಿಗೆ ಸಾಮಾಜಿಕವಾಗಿ ಪರಂಪರಾಗತವಾಗಿ ಬಂದ ಪರಿಮಿತಿಗಳನ್ನೂ ಅಕ್ಕ ಧಿಕ್ಕರಿಸುತ್ತಾಳೆ. ವಿರಕ್ತಿಯ ಮಾರ್ಗದಲ್ಲಿ ಹೆಣ್ಣಿಗೂ ನಡೆಯುವ ಹಕ್ಕಿದೆ, ಸಾಮರ್ಥ್ಯವಿದೆ ಎನ್ನುವುದನ್ನು ತಾನೇ ನಡೆದು ತೋರುತ್ತಾಳೆ. ಆ ಕಾಲಕ್ಕೆ ಅಂತಹ ಸಾಮಾಜಿಕ ಸಮಾನತೆಯ ಪ್ರಜ್ಞೆ ಅಕ್ಕನಿಗಿದ್ದದ್ದು ಶ್ರೇಷ್ಠ ಸಹಶರಣರಿಗೂ ದಿಗ್ಭ್ರಮೆ ಹುಟ್ಟಿಸಿದ್ದರೆ ಆಚ್ಚರಿಯಿಲ್ಲ. ಸಾಂಪ್ರದಾಯಿಕ ಸಮಾಜದ ಸಂಕೋಲೆಗಳನ್ನು ಕಿತ್ತೊಗೆದು ವಿವಾಹ ಸಂಸ್ಥೆಯ ನೆಲೆಯನ್ನೆ ಪ್ರಶ್ನಿಸಿ, ಆಧ್ಯಾತ್ಮಿಕ ಸ್ತರದ ಸತಿಪತಿಭಾವದಲ್ಲಿ ತಲ್ಲೀನಳಾಗುತ್ತಾಳೆ. ತಾನೊಲಿದ ದೇವ ಚೆನ್ನಮಲ್ಲಿಕಾರ್ಜುನನೂ ತನಗೊಲಿದಿದ್ದಾನೆ ಎನ್ನುವ ಭಾವಾವೇಶಕ್ಕೆ ಒಳಗಾಗುತ್ತಾಳೆ.

ಹರನೇ ನೀನೆನಗೆ ಗಂಡನಾಗಬೇಕೆಂದು
ಅನಂತಕಾಲ ತಪಿಸಿದ್ದೆ ನೋಡಾ,
ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ
ಶಶಿಧರನ ಹತ್ತಿರಕೆ ಕಳುಹಿದರೆಮ್ಮವರು
ಭಸ್ಮವನೆ ಹೂಸಿ ಕಂಕಣವನೆ ಕಟ್ಟಿದರು
ಚೆನ್ನಮಲ್ಲಿಕಾರ್ಜುನಯ್ಯ ನನಗೆ ನೀನಾಗಬೇಕೆಂದು.

ತನ್ನ ನಲ್ಲನೊಂದಿಗೆ ತನ್ನ ಮದುವೆ ಹೇಗೆ ನಡೆಯುತ್ತದೆ ಎಂಬ ಕಲ್ಪನೆಯನ್ನೂ ಅಸಾಮಾನ್ಯ ರೀತಿಯಲ್ಲೇ ಅವಳು ಬಣ್ಣಿಸುತ್ತಾಳೆ.

ಪಚ್ಚೆಯ ನೆಲಗಟ್ಟು ಕನಕದ ತೋರಣ
ವಜ್ರದ ಕಂಭ ಪವಳದ ಚಪ್ಪರವನಿಕ್ಕಿ
ಮುತ್ತು ಮಾಣಿಕದ ಮೇಲುಕಟ್ಟಿ ಕಟ್ಟಿ
ಮದುವೆಯ ಮಾಡಿದರು;
ನಮ್ಮವರೆನ್ನ ಮದುವೆಯ ಮಾಡಿದರು
ಕಂಕಣ ಕೈಧಾರೆ ಸ್ಥಿರ ಸೇಸೆಯನಿಕ್ಕಿ
ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ
ಮದುವೆಯ ಮಾಡಿದರು.

ಅದೇ ಇನ್ನೊಂದು ವಚನದಲ್ಲಿ ಸಂಪೂರ್ಣ ಪರಿತ್ಯಾಗವನ್ನು ಅರಹುತ್ತಾಳೆ. ಆದರೂ ಇಲ್ಲೂ ಅವಳ ಪತಿ ಮಾತ್ರ ಚೆನ್ನಮಲ್ಲಿಕಾರ್ಜುನನೇ.

ಮಂಗಳವೇ ಮಜ್ಜನವೆನಗೆ
ವಿಭೂತಿಯೆ ಒಳಗುಂದದರಿಸಿನವೆನಗೆ
ದಿಗಂಬರವೆ ದಿವ್ಯಾಂಬರವೆನಗೆ
ಶಿವಪಾದರೇಣುವೇ ಅನುಲೇಪನವೆನಗೆ
ರುದ್ರಾಕ್ಷಿಯೇ ಮೈದೊಡಿಗೆ ಎನಗೆ
ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ
ಚೆನ್ನಮಲ್ಲಿಕಾರ್ಜುನನೇ ಗಂಡನೆನಗೆ
ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ
ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವ.

ದೈವತ್ವವನ್ನು ತಲುಪುವುದೇ ತಮ್ಮ ಪರಮಧ್ಯೇಯ ಎಂದು ಭಾವಿಸುವುದು ಅನುಭಾವಿಗಳಿಗೆ ಹೊಸತಲ್ಲ. ಗಿರಿಧರ ಪ್ರಭುವನ್ನೇ ಪತಿಯೆಂದು ಓಲೈಸುವ ಮೀರೆಯಂತೆ, ಹೆಂಡತಿಯನ್ನೇ ಮಾತೃಭಾವದಿಂದ ಆರಾಧಿಸುವ ರಾಮಕೃಷ್ಣರಂತೆ ಮಗನನ್ನೇ ದೇವನೆಂದು ಕಾಣುವ ಬಿಜ್ಜಮಹಾದೇವಿಯಂತೆ ಜಾತಿ, ಲಿಂಗ ವಯಸ್ಸು ವರ್ಣಭೇದಗಳನ್ನೆಲ್ಲ ಮೀರಿ ಅಕ್ಕನೂ ಚೆನ್ನಮಲ್ಲಿಕಾರ್ಜುನನಲ್ಲಿ ಅನುರಕ್ತಳಾಗುವುದು ಆಕೆಯ ಅನುಭಾವದ ಪರಾಕಾಷ್ಠೆಯನ್ನು ಒತ್ತಿ ಹೇಳುತ್ತದೆ. ಭಕ್ತ, ದೇವನೊಂದಿಗೆ ತನ್ನ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಅನುಭಾವ ಸಾಹಿತ್ಯ ರಚನಾವೈಖರಿಯೂ ಆಗಿದೆ. ಇದೇ ಹೊಳಹು ಅಕ್ಕಮಹಾದೇವಿಯ ವಚನಗಳಲ್ಲಿ ನಿರಂತರ ಹರಿಯುತ್ತದೆ. ಅಕ್ಕ ಹೆಣ್ಣಾಗಿರುವುದೂ ಚೆನ್ನಮಲ್ಲಿಕಾರ್ಜುನ ಗಂಡು ಹೆಸರಾಗಿರುವುದೂ ಇಲ್ಲಿ ಕಾಕತಾಳೀಯ ಮಾತ್ರ. ಅವಳ ದೃಷ್ಟಿಯಲ್ಲಿ ತಾನು ಹೆಣ್ಣೂ ಅಲ್ಲ, ತಾನೊಲಿದ ದೈವ ಗಂಡೂ ಅಲ್ಲ. ಅವನ ಹೆಸರು ಪುರುಷರೂಪಿಯದು ಎಂದಾದರೂ ಅವನ ಸ್ವರೂಪ ಮಾತ್ರ ಅಕ್ಕನದೇ ಕಾಣ್ಕೆ. ಅವಳ ಉಪಾಸ್ಯ ವಸ್ತು, ಅವ್ಯಕ್ತ, ಅಗೋಚರ, ಅಮೂರ್ತ ಪರಮ ನಿರಂಜನದ ಇಷ್ಟಲಿಂಗವಾಗಿತ್ತು, ಅವಳ ಅಂತರ್ಯದ ಬೆಳಕಾಗಿತ್ತು.

ಲೌಕಿಕ ದಾಂಪತ್ಯಜೀವನವನ್ನು ಒದ್ದು ಪಾರಮಾರ್ಥಿಕತೆಯ ರಾಜಮಾರ್ಗದಲ್ಲಿ ಸಮಸ್ತ ಬಾಹ್ಯ ಸಂಪತ್ತನ್ನೂ ತೊರೆದು ಸಾಗುವ ಅಕ್ಕನಿಗೆ ಅನುಭವ ಮಂಟಪವೇ ಸಾಧನೆಯ ಬಯಲು. ಅನುಭಾವಿಗಳ, ಸಕಲ ಶಿವಶರಣರ ಸಂಗದಲ್ಲಿ ಆಕೆ ನಲಿಯುವ ಗಿರಿಯ ನವಿಲು. "ಅಯ್ಯ, ನಿಮ್ಮ ಅನುಭಾವಿಗಳು ಒರೆದೊರೆದು ಆಗು ಮಾಡಿದ ಕಾರಣ ಚೆನ್ನಮಲ್ಲಿಕಾರ್ಜುನ ನಿಮಗಾನು ತೊಡಿಗೆಯಾದೆನು" ಎಂದು ತನ್ನ ಶರಣಬಂಧುಗಳ ಸಹವಾಸವನ್ನು ಅನನ್ಯತೆಯಿಂದ ಸ್ಮರಿಸುತ್ತಾಳೆ. ಸತ್ಸಂಗದ ಮಹಿಮೆಯನ್ನು ಹೀಗೆ ವರ್ಣಿಸುತ್ತಾಳೆ :

ಅಯ್ಯ ನಿಮ್ಮ ಅನುಭಾವಿಗಳ ಸಂಗದಿಂದ

ಎನ್ನ ತನು ಶುದ್ಧವಾಯಿತ್ತು
ಅಯ್ಯ ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಮನ ಶುದ್ಧವಾಯಿತ್ತು.

ಹೀಗೆ ತೀವ್ರ ಭಗವದ್ವ್ಯಾಕುಲತೆ, ವೈರಾಗ್ಯ ಮತ್ತು ಸತ್ಸಂಗಗಳ ಮೂಲಕ, ನಿರಂತರ ಸಾಧನೆಯ ಮೂಲಕ ಅಕ್ಕಮಹಾದೇವಿ ಭಗವಂತನ ಸಾಕ್ಷಾತ್ಕಾರವನ್ನು ಪಡೆಯುತ್ತಾಳೆ. ಆಗ ಅವನು ಅವಳಿಗೆ ಸರ್ವಾಂತರ್ಯಾಮಿಯಾಗಿಯೂ ಕೊನೆಗೆ ಸರ್ವವೂ ಆಗಿ ಕಾಣುತ್ತಾನೆ. ತನ್ನ ಈ ಅನುಭವವನ್ನು ತನ್ನದೇ ಆದ ಅನನುಕರಣೀಯ ವಚನಗಳಲ್ಲಿ ವರ್ಣಿಸುತ್ತಾಳೆ :

ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಭಾವದ ಮರೆಯ ಬ್ರಹ್ಮವಾಗಿಪ್ಪ
ಚೆನ್ನ ಮಲ್ಲಿಕಾರ್ಜುನನ ನಿಲವನಾರು ಅರಿಯಬಾರದು.

ಮೇಲಿನ ವಚನದಲ್ಲಿ ತನ್ನ ಆರಾಧ್ಯ ದೈವ ತನ್ನ ಭಾವಕ್ಕಷ್ಟೇ ನಿಲುಕುವ ವಸ್ತುವಿಶೇಷ ಎನ್ನುತ್ತಾಳೆ. ಹಾಗೆ ಅವನನ್ನು ಕಾಣಬಲ್ಲ ಕಂಗಳಿಗೆ ಅವನು ಸರ್ವಾಂತರ್ಯಾಮಿ ಎಂದೂ ಹೇಳುತ್ತಾಳೆ.

ವನವೆಲ್ಲ ನೀವೆ
ವನದೊಳಗಣ ದೇವತರುವೆಲ್ಲ ನೀವೆ
ತರುವಿನೊಳಗಾಡುವ ಖಗಮೃಗವೆಲ್ಲ ನೀವೆ
ಚೆನ್ನ ಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ

ಇದು ಅಕ್ಕ ಮಹಾದೇವಿಯ ಆಧ್ಯಾತ್ಮಿಕ ಬಾಳಿನ ಔನ್ನತ್ಯ. ಸರ್ವರೂಪಗಳಲ್ಲಿ, ಭಂಗಿಗಳಲ್ಲಿ ಅವಳ ಕಣ್ಣಿಗೆ ಆರಾಧ್ಯ ದೇವರೇ ಕಾಣಿಸಿಕೊಳ್ಳುತ್ತಾನೆ. ಆ ಅನುಭವದ ಅನಿರ್ವಚನೀಯ ಸ್ವರೂಪವನ್ನೂ **ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ** (ಆ ಪರಮಸತ್ಯ ಮಾತು ಮನಸ್ಸುಗಳಿಗೆ ನಿಲುಕದು) ಎಂಬ ಉಪನಿಷದ್ವಾಣಿಯನ್ನೂ ತನ್ನ ಈ ವಚನದಲ್ಲಿ ವರ್ಣಿಸುತ್ತಾಳೆ :

ಲಿಂಗವೆನ್ನೆ, ಲಿಂಗೈಕ್ಯವೆನ್ನೆ
ಸಂಗವೆನ್ನೆ ಸಮರಸವೆನ್ನೆ
ಆಯಿತ್ತೆನ್ನೆ ಆಗದೆನ್ನೆ
ನೀನೆನ್ನೆ ನಾನೆನ್ನೆ
ಚೆನ್ನಮಲ್ಲಿಕಾರ್ಜುನನಲ್ಲಿ
ಲಿಂಗೈಕ್ಯವಾದ ಬಳಿಕ ಏನೂ ಎನ್ನೆ.

ಹೀಗೆ ಆಕೆಯ ವಚನಗಳಲ್ಲಿ ಅಧ್ಯಾತ್ಮದ ಹಿರಿಮೆಯ, ಅನುಭಾವಿಗಳ ಸಹವಾಸ ಲಾಭದ ಅಸದೃಶವಾದ ಹಲವು ಮಿಂಚುಗಳು ಕೋರೈಸುತ್ತವೆ. ತನ್ನ ಜ್ಞಾನ-ಬುದ್ಧಿ-ವೈರಾಗ್ಯಗಳ ದಾರಿದೀಪಗಳಡಿಯಲ್ಲಿ ನಿಶ್ಚಿಂತೆ-ನಿರ್ಭಯತೆ-ನಿರ್ಲಿಪ್ತಿಗಳೊಂದಿಗೆ ಅಕ್ಕ ಮುನ್ನಡೆಯುತ್ತಾಳೆ. ಅಧ್ಯಾತ್ಮದ ಮಾರ್ಗದಲ್ಲಿ ಅವಳು ಏಕಾಕಿ. ಅವಳ ಗುರಿ ಚೆನ್ನಮಲ್ಲಿಕಾರ್ಜುನ. ಅವಳಿಗೆ ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದರೆ ಕೆರೆ ಹಳ್ಳ ಬಾವಿಗಳುಂಟು. ಶಯನಕ್ಕೆ ಹಾಳು ದೇಗುಲವುಂಟು. ಆತ್ಮ ಸಂಗಾತಕ್ಕೆ ಚೆನ್ನಮಲ್ಲಿಕಾರ್ಜುನನೇ ಉಂಟೆಂದಮೇಲೆ ಇಹದ ಬದುಕನ್ನು ನಿಭಾಯಿಸಲು ಬೇರೇನು ಬೇಕು?

ಆಸ್ವಾದ್ಯವಾದ ಸಾಹಿತ್ಯಗುಣ, ಅನುಭಾವದ ಘನತೆ, ವ್ಯಕ್ತಿತ್ವದ ಹಿರಿಮೆ, ಜ್ಞಾನದ ಪರಮಸಂಪದದೊಂದಿಗೆ ಅಕ್ಕನ ವಚನಗಳು ಅಧ್ಯಾತ್ಮದ ನೆಲೆಯ ಬೃಹತ್ ವೃಕ್ಷಗಳೆನಿಸುತ್ತವೆ. "ಯೋಗಾಂಗ ತ್ರಿವಿಧಿ"ಯಂತಹ ಚಿಕ್ಕ ಕೃತಿಯಲ್ಲೂ, ಬೆಡಗಿನ ವಚನಗಳ ಮೂಲಕವೂ ಆಕೆ ಅಧ್ಯಾತ್ಮ ಚಂದ್ರಿಕೆಯನ್ನೇ ಸ್ಫುರಿಸುತ್ತಾಳೆ. ಎಲ್ಲೂ ಕಿಚ್ಚಿಲ್ಲ, ಉರಿ, ಜ್ವಾಲೆಗಳಿಲ್ಲ. ಆದರೂ ಅಸಾಮಾನ್ಯ ಪ್ರಕಾಶವಿದೆ.

ಕೋಟಿ ರವಿಶಶಿಗಳ್ಗೆ ಮೀಟಾದ ಪ್ರಭೆ ಬಂದು
ನಾಟಿತು ಎನ್ನ ಮನದೊಳಗದರಿಂದ
ದಾಟಿದೆನೋ ಭವದ ಕೊಳಗಳ
ತೊರೆವ ನಾದವ ಕೇಳಿ
ಉರಿವ ಜ್ಯೋತಿಯ ನೋಡಿ
ಸುರಿವ ಅಮೃತವನು ಸವಿದುಂಡ
ಕಾರಣ ತೊರೆದೆನೋ ಜನನ ಮರಣವ.

ಎನ್ನುತ್ತಾ ತನ್ನ ಅನುಭಾವ ಶ್ರೀಮಂತಿಕೆಯನ್ನು ಅತ್ಯಂತ ಸ್ವಾಭಾವಿಕವಾಗಿ ಸಾಹಿತ್ಯರೂಪದಲ್ಲಿ ಇರಿಸಿದ್ದಾಳೆ, ಅಕ್ಕ.

ಈ ಜೀವನ ನಶ್ವರ. ಆಯುಷ್ಯ ಕಳೆದುಹೋಗುತ್ತಿದೆ. ಆದರೆ ಈ ಜನ್ಮದಲ್ಲಿಯೇ ಭಗವತ್ಸಾಕ್ಷಾತ್ಕಾರವನ್ನು ಪಡೆದು ಜನ್ಮ ಸಾರ್ಥಕತೆಯನ್ನು ಪಡೆಯಬೇಕೆಂದು ಮಾನವಜನ್ಮದ ಹಿರಿಮೆಯನ್ನು ಸಾರುತ್ತಾಳೆ :

ಉದಯಾಸ್ತಮಾನವೆಂಬೆರಡು ಕೊಳಗದಲ್ಲಿ
ಆಯುಷ್ಯವೆಂಬ ರಾಶಿ ಅಳೆದು ತೀರದ ಮುನ್ನ
ಶಿವನ ನೆನೆಯಿರೆ ಶಿವನ ನೆನೆಯಿರೆ ಈ ಜನ್ಮ ಬಳಿಕಿಲ್ಲ.

ಹೀಗೆ ಅನುಭಾವದ ಅಂತಃಸತ್ವಗಳನ್ನು ತನ್ನದಾಗಿಸಿಕೊಂಡ ಅಕ್ಕನ ವಚನಗಳು ಪಾರಮಾರ್ಥಿಕ ಆನಂದದ ಉತ್ತುಂಗವನ್ನು ಸಾಕಾರಗೊಳಿಸುವ ಮೆಟ್ಟಿಲುಗಳು.

ಅಕ್ಕ ಒಬ್ಬ ಸ್ತ್ರೀಯಲ್ಲ, ಪುರುಷನೂ ಅಲ್ಲ. ಅವಳು ಬರೀ ಭಕ್ತೆ, ಲಿಂಗಾನುರಕ್ತೆ. ತನ್ನ ಅಂತಃಸ್ಥೈರ್ಯದಿಂದ ಸಮಾಜವನ್ನು ಎದುರಿಸಿ ನಡೆದ ಸಶಕ್ತೆ. ತನುಮನ ಪ್ರಾಣಗಳನ್ನೆಲ್ಲ ಚನ್ನಮಲ್ಲಿಕಾರ್ಜುನನಿಗೆ ಧಾರೆಯೆರೆದ ವಿಮುಕ್ತೆ. ತನ್ನ ವಚನ ಮಾಲಿಕೆಯಲ್ಲಿ ಪ್ರೀತಿ, ಪ್ರೇಮ, ಭಕ್ತಿ, ವಿರಕ್ತಿಯ ಕುಸುಮಗಳನ್ನು ಪೋಣಿಸಿ, ಆ ಮಾಲಿಕೆಯನ್ನು ತನ್ನ ಪ್ರಾಣಪ್ರಿಯನಿಗೆ ಸಮರ್ಪಿಸಿದ ನಿಜಸತಿ. ಅವಳ ವಚನಗಳಿಗೆ ಅನುಭವವೇ ಅಡಿಗಲ್ಲು. ಅನುಭಾವವೇ ಅವಳು ನಿರ್ಮಿಸಿದ ಕುಸುರಿ ಕೆತ್ತನೆಯ ಸ್ಫಟಿಕ ಸೌಧ.